# DAY & DATE: SUNDAY, MAY 10th, 2026

## Matter: QCFI Leader Summit

**As appeared in the Newspapers:**

**VIJAYAVANI**
(Bengaluru, Page No. 12)

ವಿಜಯವಾಣಿ
ನಂ.1 ಕನ್ನಡ ದಿನಪತ್ರಿಕೆ

# ಕೋರ್ಸ್ ಆಯ್ಕೆಯಲ್ಲಿ ಎಚ್ಚರ ವಹಿಸಿ

**ಬೆಂಗಳೂರು:** ಕಾಲೇಜು ಪೂರ್ಣಗೊಳಿಸುತ್ತಿರುವ ಪದವೀಧರರದಲ್ಲಿ ಶೇ.20ರಷ್ಟೇ ಉದ್ಯೋಗಸ್ಥರಾಗುತ್ತಿದ್ದು, ಉಳಿದವರು ತಾವು ಕಲಿಯುತ್ತಿರುವ ಶಿಕ್ಷಣ ಕುರಿತು ಆಲೋಚನೆ ಮಾಡಿಕೊಳ್ಳಬೇಕಿದೆ ಎಂದು ಭಾರತದ ಗುಣಮಟ್ಟದ ವೃತ್ತ ವೇದಿಕೆಯ (ಕ್ಯೂಸಿಎಫ್ಐ) ನಿರ್ದೇಶಕ ಎ.ಎಲ್. ಕೃಷ್ಣ ತಿಳಿಸಿದ್ದಾರೆ.

**■ ಕ್ಯೂಸಿಎಫ್ಐ ನಿರ್ದೇಶಕ ಕೃಷ್ಣ ಸಲಹೆ**

ಬಿಎನ್ಎಂ ಐಟಿ, ಭಾರತದ ಗುಣಮಟ್ಟದ ವೃತ್ತ ವೇದಿಕೆ (ಕ್ಯೂಸಿಎಫ್ಐ) ಆಯೋಜಿಸಿದ್ದ ಲೀಡರ್ ಸಮ್ಮಿಟ್ ಉದ್ಘಾಟಿಸಿ ಮಾತನಾಡಿದರು. ನಮ್ಮಲ್ಲಿ ನೂರಾರು ಕೋರ್ಸ್‌ಗಳಿವೆ. ರಾಜ್ಯದಲ್ಲಿ ಲಕ್ಷಾಂತರ ವಿದ್ಯಾರ್ಥಿಗಳು ಪದವಿ ಪೂರ್ಣಗೊಳಿಸುತ್ತಾರೆ. ಕೌಶಲ ಶಿಕ್ಷಣದ ಕೊರತೆಯಿಂದಾಗಿ ಉದ್ಯೋಗ ಪಡೆಯುವವರ ಸಂಖ್ಯೆ ತೀರಾ ಕಡಿಮೆ ಇದೆ. ಈ ಕೊರತೆ ನೀಗಿಸಿಕೊಳ್ಳಬೇಕಿದೆ ಎಂದರು.

ಇಂದಿನ ಉದ್ಯೋಗ ಮಾರುಕಟ್ಟೆಗೆ ಅವಶ್ಯವಾದ ಶಿಕ್ಷಣವನ್ನು ನೀಡಬೇಕು. ಕೈಗಾರಿಕೆಗಳ ಜತೆಗೆ ಒಪ್ಪಂದ ಮಾಡಿಕೊಳ್ಳಬೇಕು. ಆ ಮೂಲಕ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಶಿಕ್ಷಣ ನೀಡಬೇಕು ಎಂದು ಸಲಹೆ ನೀಡಿದರು.

ಬಿಎನ್ಎಂ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ನಾರಾಯಣ ರಾವ್ ಆರ್. ಮಾನೆ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಅಡಗಿರುವ ಆಲೋಚನೆಗಳನ್ನು ಹೊರ ತರಬೇಕಾದಲ್ಲಿ ಈ ರೀತಿಯ ಕಾರ್ಯಕ್ರಮಗಳು ಅವಶ್ಯಕ ಎಂದರು.

ಬಿಎನ್ಎಂಐಟಿ ಪ್ರಾಂಶುಪಾಲ ಡಾ. ಎಸ್. ವೈ. ಕುಲಕರ್ಣಿ, ನಿರ್ದೇಶಕ, ಪ್ರೊ. ಟಿ.ಜಿ. ರಾಮಮೂರ್ತಿ, ಕಾಲೇಜಿನ ಉಪ ನಿರ್ದೇಶಕ ಡಾ. ಜಿ.ಎನ್. ಕೃಷ್ಣಮೂರ್ತಿ, ಚಾರಿಟಿ ಟ್ರಸ್ಟಿಗಳಾದ ಈಶ್ವರ್ ಎನ್. ಮಾನೆ ಉಪಸ್ಥಿತರಿದ್ದರು.




ಲೀಡರ್ ಸಮ್ಮಿಟ್‌ಗೆ ಎ.ಎಲ್. ಕೃಷ್ಣ ಚಾಲನೆ ನೀಡಿದರು. ನಾರಾಯಣ ರಾವ್ ಆರ್. ಮಾನೆ, ಡಾ. ಎಸ್. ವೈ. ಕುಲಕರ್ಣಿ, ಪ್ರೊ. ಟಿ.ಜಿ. ರಾಮಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

Bengaluru Edition
May 10, 2026 Page No. 12